**ಇಂದು ದಿನಾಂಕ:11.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ವಕೀಲರಿಂದಃ**

ದಾಸಿಚೆನ್ನಯ್ಯ ತೀರಿಕೊಂಡ ದಿನಾಂಕ ಗೊತ್ತಿಲ್ಲ ಬಹಳ ದಿನಗಳ ಹಿಂದೆಯೇ ತೀರಿಕೊಂಡಿದ್ದಾರೆ. ದಾಸಿಚೆನ್ನಯ್ಯನವರನ್ನು ನಾನು ನೋಡಿಲ್ಲ. ದಾಸಿಚೆನ್ನಯ್ಯನವರ ಮರಣ ದೃಢೀಕರಣವನ್ನು ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾಸಿಚೆನ್ನಯ್ಯನವರಿಗೆ ಚೆನ್ನಮ್ಮ ಒಬ್ಬಳೇ ಮಗಳು. ಚೆನ್ನಮ್ಮ ದಾಸಿಚೆನ್ನಯ್ಯರವರ ಮಗಳು ಎಂದು ತೋರಿಸುವ ದಾಖಲೆಯನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಚೆನ್ನಮ್ಮರವರಿಗೆ 6 ಜನ ಮಕ್ಕಳು. ಚೆನ್ನಮ್ಮ ರಾಮನಾಂಥತುಂಗಾ ಗ್ರಾಮದಲ್ಲಿ ವಾಸವಿದ್ದರು. ಆ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೆ. ಯಾವ ದಾಖಲೆ ಕೊಟ್ಟಿದ್ದೀರಿ ಎಂದರೆ ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ನ್ಯಾಯಾಲಯಕ್ಕೆ ಖರ್ದಾ ಮತ್ತು ಆಕಾರ್ ಬಂದ್ ಸ್ಕೆಚ್ ಕೊಟ್ಟಿದ್ದೇನೆ. ಚೆನ್ನಮ್ಮ ರಾಮನಾಥತುಂಗಾ ಗ್ರಾಮದಲ್ಲಿ ಮತದಾನ ಮಾಡುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇನೆ. ದಾಸಿಚೆನ್ನಯ್ಯನವರ ತಂದೆಯ ಹೆಸರು ಗೊತ್ತಿಲ್ಲ. ಅವರ ಹೆಸರನ್ನು ತಿಳಿದುಕೊಳ್ಳಲು ತೊಂದರೆ ಇರಲಿಲ್ಲ. ನಾನು 1962-63 ರಲ್ಲಿ 7 ನೇ ತರಗತಿ ಓದಿದ್ದೇನೆ. ನಮ್ಮ ಕುಟುಂಬದ ಬಗ್ಗೆ ಏನೇನು ಆಗಿದೆ ಎಂದು 1962-63 ರಲ್ಲಿ ಮಾಹಿತಿ ಇತ್ತು ಎಂದರೆ ಸರಿ. ಆ ಕಾಲಕ್ಕೆ ಮೇಲ್ಮನವಿ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ. ನಾನು ದಾಸಿಚೆನ್ನಯ್ಯನ ವಂಶಸ್ಥರು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ನಾನು ದಾಸಿಚೆನ್ನಯ್ಯನ ವಂಶಸ್ಥರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಸ್ವಾಮಿನಾಯಕ, ಪಶ್ಚಿಮಕ್ಕೆ ಸಣ್ಣಪ್ಪ, ದಕ್ಷಿಣಕ್ಕೆ ಶಿವಲಿಂಗೇಗೌಡ, ಉತ್ತರಕ್ಕೆ ನನ್ನದೇ ಜಮೀನು. ದಾವಾ ಆಸ್ತಿಯ ಸ.ನಂ.125 ರಲ್ಲಿ 5 ಎಕರೆ 4 ಗುಂಟೆಯ ಪೂರ್ವಕ್ಕೆ ತಮ್ಮಯ್ಯ ಬಿನ್ ಲೇಟ್

ದೇವೇಗೌಡರ ಜಮೀನು ಮತ್ತು ಸೋಮನಾಯಕ ಬಿನ್ ಲೇಟ್ ಲಕ್ಕನಾಯಕರವರ ಜಮೀನು, ಪಶ್ಚಿಮಕ್ಕೆ ಸಿದ್ದೇಗೌಡ ಬಿನ್ ಲೇಟ್ ದೊಡ್ಡಬಿಳಿಗೇಗೌಡ ಅಲಿಯಾಸ್ ದೊಡ್ಡಬಿಳಗಯ್ಯ, ಚೌಡಯ್ಯ ಬಿನ್ ಅಂಕನಾಯಕ, ಮಹದೇವಮ್ಮ ಕೋಂ ಅಂಕನಾಯಕರವರ ಜಮೀನು, ದಕ್ಷಿಣಕ್ಕೆ ಸಣ್ಣಪುಟ್ಟೇಗೌಡರ ಮಕ್ಕಳಾದ ನಾಗಣ್ಣ, ಶಿವಲಿಂಗ, ರಾಜಶೇಖರ ರವರ ಜಮೀನು ಹಾಗೂ ಶಾರದಮ್ಮ ಕೋಂ ತಮ್ಮೇಗೌಡರ ಜಮೀನು, ಉತ್ತರಕ್ಕೆ ನಮ್ಮ ಜಮೀನು ಈ ಚೆಕ್ಕುಬಂಧಿಯೊಳಗೆ ನಾವು ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ಹೇಳಿದ ಚೆಕ್ಕುಬಂಧಿಯೊಳಗೆ ಪ್ರತಿವಾದಿಗಳು ಸ್ವಾಧೀನವಿದ್ದಾರೆ ಎಂದರೆ ಸರಿಯಲ್ಲ. ಈಗ ಹೇಳಿದ ಚೆಕ್ಕುಬಂಧಿಯಲ್ಲಿ ಸ್ವಾಧೀನ ಇರುವುದಾಗಿ ವಾದ ಪತ್ರದಲ್ಲಿ ಬರೆಸಿದ್ದೇನೆ. ನನ್ನ ವಾದ ಪತ್ರದಲ್ಲಿ ಪೂರ್ವಕ್ಕೆ ಸ್ವಾಮಿನಾಯಕ, ಪಶ್ಚಿಮಕ್ಕೆ ಸಣ್ಣಪ್ಪ, ದಕ್ಷಿಣಕ್ಕೆ ಶಿವಲಿಂಗೇಗೌಡ, ಉತ್ತರಕ್ಕೆ ನನ್ನದೇ ಜಮೀನು ಬರೆಸಿ ಹಾಕಿದ್ದೇನೆ. ಸ.ನಂ.125 ರ 5 ಎಕರೆ 4 ಗುಂಟೆಯಲ್ಲಿ ನಾವು ಯಾರು ಸ್ವಾಧೀನವಿಲ್ಲ ಪ್ರತಿವಾದಿಗಳು ಮಾತ್ರ ಸ್ವಾಧೀನವಿದ್ದಾರೆ ಎಂದರೆ ಸುಳ್ಳು. 1950 ರಿಂದಲೂ ಪ್ರತಿವಾದಿಗಳ ತಾತ ಬಿಳಗಯ್ಯನವರ ಹೆಸರಿನಲ್ಲಿ ದಾಖಲೆಗಳು ಬರುತ್ತಿವೆ ಎಂದರೆ ಸುಳ್ಳು. ಬಿಳಗಯ್ಯ ತೀರಿಕೊಂಡ ನಂತರ ಅವರ ಮಗ ದೊಡ್ಡಬಿಳಗಯ್ಯನವರ ಹೆಸರಿಗೆ ಖಾತೆಯಾಗಿದೆ ನಂತರ ಅವರ ಮರಣಾ ನಂತರ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸುಳ್ಳು. ಯಾರ ಹೆಸರಿನಲ್ಲಿ ಜಮೀನು ಇರುತ್ತದೆಯೋ ಅವರ ಹೆಸರಿಗೆ ಮಾತ್ರ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕೊಡುತ್ತಾರೆ ಎಂದರೆ ನನ್ನ ಹೆಸರಿಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದೇನೆ. ಆ ಬಗ್ಗೆ ದಾಖಲೆ ಇದೆ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಪ್ರತಿವಾದಿಗಳು ಕೊಳವೆ ಬಾವಿ ಕೊರೆಯಿಸಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳು ದೊಡ್ಡಬೇಲಾಳು ಗ್ರಾಮದ ವ್ಯವಸಾಯ ಸಹಕಾರ ಸೇವಾ ಸಂಘದಿಂದ ಸಾಲ

ಪಡೆದು ಅಭಿವೃದ್ಧಿಪಡಿಸಿ ಅದರಲ್ಲಿ ಕುಟುಂಬದ ಸಮೇತ ವ್ಯವಸಾಯದ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸುಳ್ಳು. ಅದಾದ ನಂತರ ಅಬ್ಬೂರು ಎಸ್.ಬಿ.ಐ ಯಿಂದ ಸಾಲ ಪಡೆದು ಪ್ರತಿವಾದಿಗಳು ಭೂಮಿ ಅಭಿವೃದ್ಧಿಪಡಿಸಿದ್ದಾರೆ ಎಂದರೆ ಸುಳ್ಳು. ಯಾರ ಹೆಸರಿನಲ್ಲಿ ಭೂಮಿ ಇರುತ್ತದೆ ಅವರ ಹೆಸರಿಗೆ ಮಾತ್ರ ಸಾಲ ಕೊಡುತ್ತಾರೆ ಎಂದರೆ ದಾಖಲೆಗಳನ್ನು ತಿದ್ದುಪಡಿ ಮಾಡಿಕೊಂಡು ಸಾಲ ಕೊಡುತ್ತಾರೆ. ದಾಖಲೆಗಳನ್ನು ತಿದ್ದುಪಡಿ ಮಾಡಿಕೊಂಡಿರುವ ಬಗ್ಗೆ ತಕರಾರು ಸಲ್ಲಿಸಲು ತೊಂದರೆ ಇತ್ತು ಎಂದರೆ ನ್ಯಾಯಾಲಯಕ್ಕೆ ತಕರಾರು ಕೊಟ್ಟಿದ್ದೇನೆ. ದಾಖಲೆಗಳನ್ನು ತಿದ್ದುಪಡಿ ಮಾಡಿಕೊಂಡಿರುವ ಬಗ್ಗೆ ತಹಶೀಲ್ದಾರ್ ಅಥವಾ ಉಪವಿಭಾಗಾಧಿಕಾರಿ ಮುಂದೆ ತಕರಾರು ಸಲ್ಲಿಸಲು ತೊಂದರೆ ಇತ್ತಾ ಎಂದರೆ ಇಲ್ಲ. ದಾಸಿಚೆನ್ನಯ್ಯ ಎಂಬುವರು ಊರಿನಲ್ಲಿ ಇರಲಿಲ್ಲ ಹಾಗೂ ಅವರ ಹೆಸರಿನಲ್ಲಿ ಯಾವುದೇ ದಾಖಲೆ ಇರಲಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಸುಳ್ಳು ಮತ್ತು ಕಲ್ಪಿತ ಚೆಕ್ಕುಬಂಧಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಎಲ್ಲಿದೆ ಎಂದು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನೇನು ಬರೆಸಿದ್ದೇನೆ ಎಂದು ಗೊತ್ತಿದೆ. ದಾಸಿಚೆನ್ನಯ್ಯನವರಿಗೆ ಮಗಳು ಇದ್ದಳು ಎಂದು ವಾದ ಪತ್ರದಲ್ಲಿ ಬರೆಸಿದ್ದೇನೆ. ದಾಸಿ ಚೆನ್ನಮ್ಮ ನನ್ನ ತಾಯಿ ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. 3 ನೇ ತಲೆಮಾರಿನ ಬಗ್ಗೆ ಆಸ್ತಿ ಕೇಳುತ್ತಿದ್ದೇನೆ ಎಂದರೆ ಸರಿ. 3 ನೇ ತಲೆಮಾರಿನಿಂದ ಯಾರ ಯಾರ ಹೆಸರಿಗೆ ದಾಖಲೆಗಳಾಗಿವೆ ಎಂದು ನನಗೆ ಖುದ್ದು ಮಾಹಿತಿ ಇದೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನವಿಲ್ಲದಿದ್ದರೂ ಪ್ರತಿವಾದಿಗಳ ಆಸ್ತಿ ಕಬಳಿಸಬೇಕೆಂದು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು

ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಕಂದಾಯ ಕಟ್ಟಿಲ್ಲ ನನ್ನ ತಾತ ಕಟ್ಟಿದ್ದಾರೆ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**